158 ನೇ ಮು. ಉ S.L NO:-5, 09/03/2026

# ಕರ್ನಾಟಕ ವಿಧಾನ ಪರಿಷತ್ತು
# ನೂರ ಇವತ್ತೆಂಟನೆಯ ಅಧಿವೇಶನ
# ಶೂನ್ಯವೇಳೆಗೆ ಉತ್ತರಿಸುವ ಕುರಿತು

**"ಗಡಿನಾಡ ಕನ್ನಡಿಗರಿಗೆ ಭಾಷಾತಂಕ" ಎಂದು ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಶ್ರೀಮತಿ. ಬಲ್ಕಿಸ್ ಬಾನು, ಮಾನ್ಯ ಶಾಸಕರು ಕರ್ನಾಟಕ ವಿಧಾನ ಪರಿಷತ್ತು ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಕುರಿತು :**

- ಕರ್ನಾಟಕ ಗಡಿ ಅಭಿವೃದ್ಧಿ ಪ್ರದೇಶ ಪ್ರಾಧಿಕಾರವು 19 ಜಿಲ್ಲೆಗಳ 63 ತಾಲುಕುಗಳು ಹಾಗೂ 06 ಹೊರ ರಾಜ್ಯಗಳಾದ ಮಹಾರಾಷ್ಟ್ರ, ಕೇರಳ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಗೋವಾ ಗಡಿ ರಾಜ್ಯಗಳಲ್ಲಿನ ಗಡಿಭಾಗದ ಕನ್ನಡಿಗರಿಗೆ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯನ್ನು ಸುಧಾರಿಸಲು ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

- ಕೇರಳ ರಾಜ್ಯವು ಸಿದ್ಧಪಡಿಸಿದ 'ಮಲಯಾಳಂ ಭಾಷಾ ಮಸೂದೆ 2025'ಕ್ಕೆ ಕೇರಳ ರಾಜ್ಯಪಾಲರು ಅಂಕಿತವಾಕಿದ್ದು ಇದರಿಂದ ಕನ್ನಡ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಕಡ್ಡಾಯವಾಗಿ ಮಲಯಾಳಂ ಭಾಷೆ ಕಲಿಯಬೇಕಾದ ಅನಿವಾರ್ಯತೆ ಎದುರಾಗುತ್ತಿದೆ. ಕೇರಳ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಲಯಾಳಂ ಪ್ರಥಮ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗುವುದರಿಂದ ಸಮಸ್ಯೆಯಾಗುವುದನ್ನು ಮನಗಂಡ ರಾಜ್ಯ ಸರ್ಕಾರವು ಇಂತಹದೇ ಮಸೂದೆಯನ್ನು 2017ರಲ್ಲಿ ಭಾರತದ ರಾಷ್ಟ್ರಪತಿಗಳು ತಿರಸ್ಕರಿಸುವ ಅಂಶವನ್ನು ಕೇರಳದ ಗಡಿ ಪ್ರದೇಶದ ಕೆಲವು ಸಂಘ-ಸಂಸ್ಥೆಗಳು ವಕೀಲರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೇರಳದ ರಾಜ್ಯಪಾಲರಾದ ಶ್ರೀ ರಾಜೇಂದ್ರ ವಿಶ್ವನಾಥ ಅರ್ಲೇಕರ್‌ರವರನ್ನು ದಿನಾಂಕ 07-01-2026ರಂದು ಕಾಸರಗೋಡಿನಲ್ಲಿ ಭೇಟಿ ಮಾಡಿ **ಮಲಯಾಳಂ ಮಸೂದೆ 2025ಯಿಂದ ಕಾಸರಗೋಡನ್ನು ಹೊರತುಪಡಿಸಲು ಮನವಿ ಸಲ್ಲಿಸಲಾಗಿದೆ** . ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರು ಕೇರಳ ಮುಖ್ಯಮಂತ್ರಿ ಅವರಿಗೆ ದಿನಾಂಕ 08.01.2026ರಂದು ಪತ್ರ ಬರೆದು ಸದರಿ ಮಸೂದೆಯನ್ನು ಹಿಂಪಡೆಯಲು ಕೋರಿರುತ್ತಾರೆ.

ಈ ಮೇಲ್ಕಂಡಂತೆ ಕ್ರಮವಹಿಸಿದ್ದಾಗಿಯೂ ಕೇರಳ ಸರ್ಕಾರ ಕಾಸರಗೋಡಿನ ಕನ್ನಡಿಗರಿಗೆ ತೊಂದರೆ ನೀಡಲು ಪ್ರಯತ್ನಿಸಿದ್ದಲ್ಲಿ ರಾಜ್ಯ ಸರ್ಕಾರವು ಗಡಿನಾಡಿನಲ್ಲಿರುವ ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಡಿ. ಸುಧಾಕರ್
ಮಾನ್ಯ ಸಚಿವರು
ಯೋಜನಾ ಇಲಾಖೆ